ಕರಕೊಂಡು ಹೋಗಿದ್ದೆ. ‘ಈ ವರ್ಷ ಭಾಳ ಮಂದಿ ಇದ್ದಾರ. ಆಗೂದುಲ್ಲ’ ಅಂದ್ರಪಾ” ಎಂದ ನಿರಾಸೆಯಿಂದ. “ನನಗ ಅವರ ಪರಿಚಯ ಭಾಳ ಛೊಲೊ ಅದ. ನಾ ಹೇಳಿ ಸೇರಸ್ತೇನಿ ಬಿಡು” ಎನ್ನುತ್ತ ಅವಳ ತಲೆ ಸವರಿದೆ. ಅವನು ಆನಂದಿತನಾಗುತ್ತ “ಕೇಳು, ಕೇಳು, ಹ್ಞೂಂ ಅಂದರ ಖುಷಿಯಾಗ್ತದ. ಅಂಥಂಗ ವೈನಿ ಊರಾಗಿರದಿದ್ದರೂ ಮೌಶಿನ್ನ ಈ ಪರಿಸ್ಥಿತಿಯೊಳಗ ಭಾಳ ಛೊಲೊ ನೋಡಕೊಳ್ಳಿಕತ್ತಿ. ಎಷ್ಟೆಲ್ಲಾ ವ್ಯವಸ್ಥಾ ಇಟ್ಟೇದಿ. ಭಾಳ ಸಂತೋಷಾತಪಾ” ಎಂದು ಬೆನ್ನು ತಟ್ಟಿದವನು “ಹೆಂಗ ನಡದದ ನಿನ್ನ ಬಿಸಿನೆಸ್?” ಎಂದು ಕೇಳಿದವ ತಪ್ಪು ಮಾತನಾಡಿದವರಂತೆ ನಾಲಿಗೆ ಕಚ್ಚಿಕೊಂಡ. ನಾನು ನಿರಾಸೆಯಿಂದ ಸುಮ್ಮನೆ ತಲೆಯಾಡಿಸಿದೆ. “ನಮ್ಮ ಫ್ರೆಂಡ್ ಒಬ್ಬರಿದ್ದಾರ. ಅವ್ರಿಗೆ ಪೈಪ್ಸ್ ಬೇಕಾಗ್ಯಾವ. ಖರೆ ನೀ ಹೇಳಿದ ಟೈಮಿಗೆ ಕೊಡಬೇಕ ಮತ್ತ...” ಎಂದ. “ತಯಾರವನೋ... ಬೇಕಾದ್ರ ಸದ್ಯಾ ಕೊಡತೇನಿ” ಎಂದೆ. ಫೋನಿನಲ್ಲಿ ಮಾತುಕಥೆಯಾಗಿ ವ್ಯವಹಾರ ಕುದುರಿತು. ನನ್ನ ಮನ ನವಿಲಾಗಿ ನರ್ತಿಸುತ್ತಿತ್ತು. ಈ ಬಾರಿ ಬಹಳ ಜಾಗರೂಕತೆಯಿಂದ, ನಿಷ್ಠೆಯಿಂದ ವ್ಯವಹಾರ ಮಾಡಬೇಕೆಂದು ತೀರ್ಮಾನಿಸಿದೆ. ದುಂಡಪ್ಪನಿಗೆ “ಮಾಲು ಎಲ್ಲಾ ಚೆಕ್ ಮಾಡ್ರಿ. ಒಂದೂ ಕಂಪ್ಲೇಂಟ್ ಬರಬಾರದು. ನಾ ಬಂದು ಡೆಲಿವರಿ ಮಾಡ್ತೇನಿ” ಎಂದು ಸೂಚನೆ ನೀಡಿದೆ. ಸಹನಾ ಬಂದದ್ದರಿಂದ ಅವ್ವನ ಚಿಂತೆ ಕಳೆದಿತ್ತು. ಕುಣಿಯುತ್ತಲೇ ಹೋದೆ.

ಮರುದಿನ ಸಹನಾ ತಿಂಡಿ ತಿಂದು ಕಾಲೇಜಿಗೆ ಹೋದಳು. ನರ್ಸು, ಅಡಿಗೆಯವಳು ತಮ್ಮ ಕೆಲಸ ಮುಗಿಸಿ ಮರಳಿದರು. ನಾನು ಮೇಕಪ್ ಆರಂಭಿಸಿದೆ. ಅರ್ಧ, ಮುಕ್ಕಾಲು ಗಂಟೆಯಾದರೂ ಬೇಕಾಗುತ್ತಿತ್ತು. ಮೈ ಕಾಣುವಲ್ಲೆಲ್ಲ ನೀಲಿ ಬಣ್ಣ ಬಳಿದುಕೊಳ್ಳುವದೂ ಎಂದರೆ... ಸಾಕಾಗಿ ಹೋಗುತ್ತಿತ್ತು. ಪೂರ್ತಿ ತಯಾರಾಗಿ ಅವ್ವನ ಕೋಣೆಯೊಳಗೆ ದಾಖಲಾದೆ. ಎಡಗೈಯಿಂದ ಜಪಮಾಲೆ ತಿರುವುತ್ತಿದ್ದವಳ ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು. ತನ್ನ ಆರಾಧ್ಯದೈವವನ್ನು ಕಂಡೊಡನೆ ಬೆರಗಾದಳು. “ಭಕ್ತೆ” ಎನ್ನುತ್ತ ಆಶೀರ್ವಾದ ಸ್ವರೂಪ ಕೈ ಎತ್ತಿದೆ. ಅವಳು ಆನಂದದಿಂದ ತನ್ನ ಎಡಗೈಯನ್ನೇ ಎದೆಗೆ ಮುಟ್ಟಿಸಿಕೊಂಡು “ನಮ್ಮಪ್ಪ ಶಿವಪ್ಪಾ, ಶಂಭೋ ಶಂಕರಾ... ಮತ್ತ ಬಂದ್ಯಲಾ. ನಿನ್ನೆ ಭಾಳ ಗಡಿಬಿಡ್ಯಾಗ ಹೋಗಿಬಿಟ್ಟಿ. ನಾ ಪೂರ್ತಿ ಹೇಳ್ಲಿಕ್ಕೆ ಆಗಲಿಲ್ಲಂತ ಹಳಹಳಿಸಿದೆ. ಆದರ ನಿನ್ನೆ ಒಂದ ದಿನದಾಗ ಮೊಮ್ಮಗಳ ಚಿಂತಿ ದೂರಾತು. ಅರುಣ ಅಕಿನ್ನ ಮನೀಗೆ ಕರಕೊಂಡು ಬಂದಾ. ನೀ ಖರೇನ ಭಾಳ ಸತ್ಯವುಳ್ಳಾಂವಪಾ. ನಾ ನಿನ್ನ ನೋಡ್ಲಿಕ್ಕತ್ತೀನಿ ಅಂದ್ರ ನಾನ ಪುಣ್ಯಾ ಮಾಡೀನಿ. ಮತ್ತ... ನೀ ನನ್ನ ಮಗಾ ಅರುಣನ್ಹಂಗ ಕಾಣಸ್ತೀ...” ಎನ್ನುತ್ತ ಕಣ್ತುಂಬಿಕೊಂಡಳು. ಉತ್ತರಕ್ಕಾಗಿ ತಡಕಾಡಿದೆ. “ಭಕ್ತೆ, ನಿನಗೆ ಭಯವಾಗಬಾರದೆಂದು ನಿನ್ನ ಮಗನ ರೂಪದಲ್ಲಿ ಬಂದಿದ್ದೇನೆ. ನನ್ನ ಅಸಲಿ ರೂಪವನ್ನು ನೀವು ಗ್ರಹಿಸಲಾರಿರಿ. ನಿನ್ನಿನ ದಿನ ನೀನು ನಿನ್ನ ಚಿಂತೆಯನ್ನು ಸಂಪೂರ್ಣ ನನಗೆ ಹೇಳಲಾಗಲಿಲ್ಲ. ಅದಕ್ಕೆ ಮತ್ತೆ ಬರಬೇಕಾಯಿತು” ಎಂದೆ. ಅವಳು ಮುಖ ಮುದುಡಿಸಿಕೊಂಡು “ಸ್ವಾಮೀ, ನನ್ನ ಈ ಕರ್ಮ ಲಗೂನ ಕಳೆಯೋ ಹಂಗ ಮಾಡಪಾ. ಮತ್ತ ಅರುಣಗ ಬಿಸಿನೆಸ್‌ನ್ಯಾಗ ಏರಿಕಿ ಆಗ್ಲಿ. ನಮ್ಮ ಕಿರಣಂದು ಎಲ್ಲಾ ಛೊಲೊ ಅದ. ಗಂಡ, ಹೆಂಡ್ತಿ ಇಬ್ಬರೂ ದುಡೀತಾರ. ರಗಡ ಭಂಗಾರ, ಶ್ರೀಮಂತಿಕಿ ತುಂಬೇದ. ಖರೆ ಮಗಾ ಸುನಯ್ ಸ್ವಲ್ಪ ನಿಧಾನದ. ವಯಸ್ಸಿನ ತಕ್ಕ ಬುದ್ಧಿ ಇಲ್ಲಾ. ಅವರಿಬ್ಬರಿಗೂ ಅದೊಂದು ಕೊರಗಾಗಿಬಿಟ್ಟದ. ನಮಗೂ ಅದು ತಿಂತದ. ಯಾವ ಜನ್ಮದ ಪಾಪಾನೋ... ಈಗಂತೂ ಅಲ್ಲಿ ಭಾಷಾ ಬ್ಯಾರೇ ಆಗೇದ. ಏನೂ ತಿಳಿಯೂದಿಲ್ಲಂತ. ಸಾಲಿಗೆ ಹೋಗೂದಿಲ್ಲಂತ ಹಟಾ ಮಾಡ್ತಾನಂತ. ಜೋರಾವರೀಲೆ ಕಳಸಿದ್ರ